ಬಂದ ಕಣೇ..." ಎಂದು ಹೆಮ್ಮೆಯಿಂದ ಹೇಳುತ್ತಿದ್ದರು. ಎರಡೇ ವರ್ಷಗಳಲ್ಲಿ ಕಂಪನಿ ಅವನನ್ನು ಪ್ರೊಜೆಕ್ಟ್‌ಗೋಸ್ಕರ ಅಮೆರಿಕೆಯ ಡಲ್ಲಾಸ್‌ಗೆ ಕಳಿಸಿದಾಗ ಸಂತೋಷವಾದರೂ ಅಗಲಿಕೆಯ ನೋವು ಕಾಡಿತ್ತು. ಶುದ್ಧ ಶಾಕಾಹಾರಿಯಾದವನಿಗೆ ಊಟದ ತೊಂದರೆಯಾಗಿತ್ತು. ವಿಡಿಯೊ ಕಾಲ್‌ನಲ್ಲಿ "ಏನು ತಿಂದ್ಯೋ?..." ಎಂದು ಕೇಳಿದಾಗ "ಸೂಪೋ... ಸಾಲಡೋ... ಮ್ಯಾಗೀನೋ... ಏನೋ ಒಂದು ಮಾಡ್ಕೋತೀನಿ" ಎನ್ನುತ್ತಿದ್ದ. ಕೇಳಿದಾಗ ಹೊಟ್ಟೆಯಲ್ಲಿ ಒಂಥರಾ ಸಂಕಟವಾಗಿ ಕಣ್ಣು ಹನಿಗೂಡುತ್ತಿತ್ತು. 'ಪಾಪ... ಏನೇನೋ ತಿನ್ಕೊಂಡು ಒದ್ದಾಡ್ತಾ ಇದೆ ಮಗು' ಎನಿಸದಿರಲಿಲ್ಲ. ಆಫೀಸಿನ ಕಾನ್ಫರೆನ್ಸ್‌ಗೆಂದು ಅಮೆರಿಕೆಗೆ ಹೋದ ವಸಂತ ಡಲ್ಲಾಸ್‌ಗೆ ಭೇಟಿಯಿತ್ತು ಮಗನನ್ನು ನೋಡಿಕೊಂಡು ಬಂದವರು "ಮದುವೆ ಮಾಡ್ಬಿಟ್ರೆ ಒಳ್ಳೇದು ಅನ್ಸುತ್ತೆ. ಮನೇಲಿ ಮಾಡ್ಕೊಳ್ಳೋಕಾಗೋಲ್ಲ. ಹೊರಗೆ ಸಿಗೋದು ಚೆನ್ನಾಗಿರಲ್ಲ. ಸಿಕ್ಕರೂ ತುಂಬಾ ದುಬಾರಿ" ಎಂದಿದ್ದರು. ಸರಿ... ಅಂದಿನಿಂದಲೇ ಮದುವೆಯ ರಾಗ ಆರಂಭವಾಯಿತು. "ಮದುವೆ ಮಾಡ್ಕೊಂಡು ಹೋಗಪ್ಪ. ನಮಗೆ ನಿನ್ನ ಚಿಂತೆ ಇರಲ್ಲ"ಎಂದು ದುಂಬಾಲು ಬಿದ್ದೆವು. ಹಸಿರು ನಿಶಾನೆ ಬಂದೊಡನೆ ನಾಲ್ಕಾರು ಸಂಬಂಧಗಳನ್ನೂ ನೋಡಿದೆವು. ಅವುಗಳಲ್ಲಿ ಪ್ರಶಾಂತರ ಒಳ್ಳೆಯತನ, ಪ್ರಾಮಾಣಿಕತೆ ಇಷ್ಟವಾಗಿದ್ದವು. ಧರಾಳ ಚೆಲುವು, ಮಾತುಕತೆ, ವಿದ್ಯಾಭ್ಯಾಸ ಮನಸ್ಸಿಗೆ ಹಿಡಿಸಿದ್ದವು. ಅಡ್ಡ ಬಂದಿದ್ದು ತಾಯಿ ಪದ್ಮಿನಿಯ ಮಾಡರ್ನ್ ನಡವಳಿಕೆ. ತುಸು ಹೆಚ್ಚೇ ಎನಿಸುವಂತಿತ್ತು. ಆದರೆ 'ನಮ್ಮ ಸೊಸೆಯಾಗಿ ಬರುವವಳು ಚೆನ್ನಾಗಿದ್ದಾಳಲ್ಲ... ಅಷ್ಟೇ ಸಾಕು' ಎಂದಿದ್ದೆವು. ಅನಂತನೂ ಯಾವ ತಕರಾರಿಲ್ಲದೇ ಒಪ್ಪಿದ್ದ. ಮೂರು ತಿಂಗಳಲ್ಲೇ ಭರ್ಜರಿಯಾಗಿ ಮದುವೆ ಮುಗಿಸಿ ಮಗ ಸೊಸೆಯನ್ನು ಕಳಿಸಿಕೊಟ್ಟು 'ಇನ್ನು ಅವನ ಚಿಂತೆ ಕಡಿಮೆಯಾಯ್ತು' ಎಂದು ನಮಗೆ ನಾವೇ ಸಂತೈಸಿಕೊಂಡೆವು. ಆದರೆ ಬೇರೆ ನೂರಾರು ಚಿಂತೆಗಳು ವಾಯುವೇಗದಲ್ಲಿ ಹತ್ತಿರ ಬಂದು ಮುತ್ತಿದ್ದು ಅರಿವಾಗಲೇ ಇಲ್ಲ.

"ಕಾಫಿ" ಎಂದು ಹುಡುಗ ಬಾಗಿಲು ಬಡಿದಾಗ ಇಬ್ಬರೂ ಎದ್ದೆವು. "ಅಮ್ಮಾ, ನೀನು ಸ್ನಾನ ಮುಗಿಸಿ ಬೇಗ ರೆಡಿಯಾಗಿಬಿಡು. ಹನ್ನೊಂದು ಗಂಟೆಗೆ ಅಪಾಯಿಂಟ್‌ಮೆಂಟ್ ಇದೆ. ಅಲ್ಲಿ ಹೋಗಿ ಕ್ಯೂನಲ್ಲಿ ಬೇರೆ ನಿಲ್ಲಬೇಕು" ಎಂದ ಸುಮಂತ. ಕಾಫಿ ಹೀರುತ್ತಲೇ ಕತ್ತಾಡಿಸಿದೆ. ಅವನು ಹೊರಗೆ "ಟಿಫನ್ ಕಾಂಪ್ಲಿಮೆಂಟರಿಯಾ?... ಏನೇನಿರುತ್ತೆ?" ಎಂದೆಲ್ಲ ತಮಿಳ್‌ಗನ್ನಡದಲ್ಲಿ ಮಾತನಾಡುತ್ತಿದ್ದ. ನಾನು ಸಿದ್ಧಳಾಗುವಷ್ಟರಲ್ಲಿ ಅವನೂ ಸ್ನಾನ ಮುಗಿಸಿ ಸಿದ್ಧನಾಗಿ ಡಾಕ್ಯುಮೆಂಟ್‌ಗಳನ್ನೆಲ್ಲ ಇನ್ನೊಮ್ಮೆ ತೋರಿಸಿದ. "ಅಮ್ಮ, ನಿನ್ನ ಪಾಸ್‌ಪೋರ್ಟ್, ಅಪಾಯಿಂಟ್‌ಮೆಂಟ್ ಫಾರ್ಮ್, ಇವೆಲ್ಲ ನಿನ್ನ ಮಾರ್ಕ್ಸ್‌ಕಾರ್ಡುಗಳು, ನಿಮ್ಮ ಮ್ಯಾರೇಜ್ ಸರ್ಟಿಫಿಕೇಟು, ಕೇಳಿದ್ರೆ ಅಪ್ಪನ ಡೆಥ್ ಸರ್ಟಿಫಿಕೇಟು ತೋರಿಸು. ಸ್ವಂತ ಮನೆ ನಿನ್ನ ಹೆಸರಿಗೆ ವರ್ಗಾವಣೆಯಾಗಿದೆ. ಏನು ಕೇಳ್ತಾರೋ ಅದಕ್ಕೆ ಮಾತ್ರ ಉತ್ತರ ಕೊಡು. ಮಗನ್ನ ವಿಸಿಟ್ ಮಾಡೋಕೆ ಹೋಗ್ತಾ ಇದೀನಿ ಅಂತ್ಹೇಳು" ಎಂದೆಲ್ಲ ಕಂಠಪಾಠ ಮಾಡಿಸಿದ. ಸಹಿ ಮಾಡಿಸಿದ. ಅಷ್ಟರಲ್ಲಿ ಹುಡುಗ ತಿಂಡಿ ತಂದು ಟೇಬಲ್ ಮೇಲಿಟ್ಟಿದ್ದ. ಇಡ್ಲಿ, ಚಟ್ನಿ, ದೋಸೆ, ಉಪ್ಪಿಟ್ಟು... ಎಲ್ಲ ಚೆನ್ನಾಗಿತ್ತು. ಇಬ್ಬರೂ ಬಡಿಸಿಕೊಂಡು ತಿಂದು ಖಾಲಿ ಮಾಡಿದೆವು. ಯುದ್ಧಕ್ಕೆ ಸನ್ನದ್ಧವಾದಂತೆ ಎದ್ದೆವು.

ಆಟೊದಲ್ಲಿ ನುಂಗಂಬಾಕಂಗೆ ಬಂದು ಸರತಿಯ ಸಾಲಿನಲ್ಲಿ ತೂರಿದಾಗ ಆಗಲೇ ಹನ್ನೊಂದು ಗಂಟೆಯಾಗಿತ್ತು. ಸುಮಂತ ಹಿಂದೆಯೇ ಬಂದು ಕೈಯಲ್ಲಿದ್ದ ಪರ್ಸು, ಮೊಬೈಲ್ ಎಲ್ಲ ತೆಗೆದುಕೊಂಡು ಬರೀ ಡಾಕ್ಯುಮೆಂಟ್‌ಗಳ ಕವರ್‌ನೊಂದಿಗೆ ಕಳಿಸುತ್ತ "ಈವತ್ತು ಬಯೋಮೆಟ್ರಿಕ್ ಟೆಸ್ಟ್ ಇರುತ್ತಮ್ಮ. ನಿನ್ನ ಬೆರಳ ಗುರ್ತು ತೊಗೋತಾರೆ. ಫೋಟೊ ತೆಗೀತಾರೆ. ಕನ್ನಡಕ ತೆಗೆದು ಪೋಸ್ ಕೊಡು. ಏನೂ ಹೆದರಬೇಡ. ಆಲ್ ದಿ ಬೆಸ್ಟ್" ಎಂದು ಧೈರ್ಯ ತುಂಬಿ ಕಳಿಸಿದ. 'ಎಷ್ಟು ಅಕ್ಕರೆ... ಕಾಳಜಿ ಮುಂಡೇದಕ್ಕೆ' ಎನಿಸಿ ಹೃದಯ ತುಂಬಿ ಬಂತು. ಅವನನ್ನು ಪರೀಕ್ಷೆಗೆ ಕಳಿಸುವಾಗ ನಾನು ಹೀಗೇ ಹೇಳಿ